# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 32/2018

ಸಿಡಬ್ಲು: 1 / ಪಿಡಬ್ಲು: 1

ದಿನಾಂಕ: 23.11.2023

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸಲಿಂಗಯ್ಯ ಸುಬ್ಬಾಪುರಮಠ |
| ತಂದೆ /ಗಂಡನ ಹೆಸರು | : | ಗುರುಪಾದಯ್ಯ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಪೋಲೀಸ್ ಇನ್ಸಪೆಕ್ಟರ, ಸಿಐಡಿ, ಬೆಂಗಳೂರು. |
| ವಾಸ ಸ್ಥಳ | : | ಬೆಂಗಳೂರು. |

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:

1. ನಾನು ದಿನಾಂಕ: 19.07.2016 ರಿಂದ 04.08.2018 ರ ವರೆಗೆ ಪಿಎಸ್‌ಐ ಗದಗ ಶಹರ ಎಂದು ಕರ್ತವ್ಯ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 23.01.2018 ರಂದು, ರಾತ್ರಿ 11.00 ಗಂಟೆಗೆ ನಾನು ವಿಶೇಷ ಗಸ್ತು ವ ಪೆಟ್ರೋಲಿಂಗ ಕರ್ತವ್ಯದ ಸಲುವಾಗಿ ಸರ್ ಸರ್ಕಾರಿ ಜೀಪ ನಂ. ಕೆಎ-02/ಜಿ-494 ನೇದ್ದರಲ್ಲಿ ಚಾಸಾ-7 ರವರ ಚಾಲನೆಯಲ್ಲಿ ಠಾಣಾ ಹದ್ದಿಯಲ್ಲಿ ಪೆಟ್ರೋಲಿಂಗ ಮಾಡುತ್ತ, ಮುಳಗುಂದ ನಾಕಾದಿಂದ ಗಂಗಿಮಡಿ ಕ್ರಾಸ್ ಕಡೆ ಹೋಗುತ್ತಿರುವಾಗ, ನಸುಕಿನ 12.45 ಗಂಟೆ ಸುಮಾರಿಗೆ, ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ವ್ಯಕ್ತಿಯು ನಮ್ಮ ಜೀಪಿಗೆ ಕೈ ಮಾಡಿದ್ದು, ನಮ್ಮ ಜೀಪನ್ನು ನಿಲ್ಲಿಸಿದಾಗ, ಸದರಿ ವ್ಯಕ್ತಿಯು ನನ್ನ ಮುಂದೆ ಬಂದು, ಗದಗ ಕಡೆಯಿಂದ ಲಕ್ಷ್ಮೇಶ್ವರದ ಕಡೆ ಹೋಗುವ ರಸ್ತೆಯ ದೋಬಿ ಘಾಟದ ರಸ್ತೆಯ ಮೇಲೆ 7 ರಿಂದ 8 ಜನರು ಕೂಡಿಕೊಂಡು ಕಾರ ಮತ್ತು ಮೋಟರ ಸೈಕಲ ತೆಗೆದುಕೊಂಡು, ತಮ್ಮ ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ನಿಂತಿದ್ದು, ಕೆಲವು ಜನರು ಕಾರಿನಲ್ಲಿ ಇದ್ದು, ಅವರಿಗೆ ನೋಡಿದರೆ ಅವರು ಯಾವುದೇ ಒಂದು ಕೃತ್ಯ ಮಾಡುವ ಹಾಗೆ ಕಾಣಿಸುತ್ತಿದೆ ಎಂದು ಹೇಳಿರುತ್ತಾರೆ.

3. ಆಗ ನಾನು ಕೂಡಲೇ, ಪೋಲೀಸ ಠಾಣೆಗೆ ವಾಪಸ್ ಬಂದು, ಠಾಣೆಯಲ್ಲಿದ್ದ ಚಾಸಾ-5 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಹೇಳಿ ಕಳಿಸಿರುತ್ತೇನೆ. ಅಲ್ಲದೇ ಎನ್.ಆರ್.

ಚೆಕ್ಕಿಂಗ ಕರ್ತವ್ಯದ ಮೇಲೆ ಇದ್ದ ಚಾಸಾ-4 ಇವರಿಗೆ ಠಾಣೆಗೆ ಬರುವಂತೆ ತಿಳಿಸಿದ್ದು, ಅವರು ಠಾಣೆಗೆ ಬಂದಿದ್ದು, ಸಿಬ್ಬಂದಿ ಜನರಾದ ಚಾಸಾ-6 ರಿಂದ 12, 14 ಮತ್ತು 15 ಇವರನ್ನು ಹಾಜರಪಡಿಸಿಕೊಂಡು, ವಿಷಯ ತಿಳಿಸುವಷ್ಟರಲ್ಲಿಯೇ, ಚಾಸಾ-5 ರವರು, ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದು, ಅದೇ ವೇಳೆಗೆ ನಮ್ಮ ಠಾಣಾ ಆವರಣದಲ್ಲಿ ಮೋಟರ ಸೈಕಲ ಇಟ್ಟು ಹೋದ ಚಾಸಾ-13 ರವರು ಬಂದಿದ್ದು ಅವರಿಗೂ ಕೂಡಾ ಕರೆದು, ಪಂಚರಿಗೂ ಹಾಗೂ ಹಾಜರ ಇದ್ದ ಸಿಬ್ಬಂದಿಗೂ ಬಂದ ಮಾಹಿತಿಯನ್ನು ತಿಳಿಸಿ, ಕಬ್ಬಿಣದ ರಾಡುಗಳನ್ನು ಹಿಡಿದುಕೊಂಡ ನಿಂತ 5 ಜನರನ್ನು ಹಾಗೂ ಉಳಿದವರನ್ನು ತಪಾಸ ಮಾಡಿ ಅವರ ಮೇಲೆ ಸಂಶಯ ಬಂದರೆ ಅವರನ್ನು ಹಿಡಿದು ನಾವು ವಿಚಾರಿಸುತ್ತೇವೆ ಅವರಿಂದ ವಶಪಡಿಸಿಕೊಂಡ ಮಾಲಿನ ಬಗ್ಗೆ ಪಂಚನಾಮೆ ಬರೆಸಿಕೊಡಬೇಕೆಂದು ಕೇಳಿಕೊಂಡಿರುತ್ತೇವೆ. ಅದಕ್ಕೆ ಚಾಸಾ-2 ಮತ್ತು 3 ರವರು ಒಪ್ಪಿರುತ್ತಾರೆ.

4. ನಂತರ ನಾನು, ಚಾಸಾ-2, 3, 5, 6, 9, 13 ನೇದ್ದವರು ಸೇರಿ ನನ್ನ ಇಲಾಖಾ ವಾಹನದಲ್ಲಿ ಹಾಗೂ ಇನ್ನುಳಿದ ಸಿಬ್ಬಂದಿ ಜನರಾದ ಚಾಸಾ-4, 10, 12, 14,15 ಸೇರಿ ಇನ್ನೊಂದು ಇಲಾಖಾ ವಾಹನದಲ್ಲಿ ಠಾಣೆಯನ್ನು ಬೆಳಗಿನ ಜಾವ 01.45 ಗಂಟೆಗೆ ಠಾಣೆಯನ್ನು ಬಿಟ್ಟು ಮುಳಗುಂದ ನಾಕಾ ಮಾರ್ಗವಾಗಿ, ಲಕ್ಷ್ಮೇಶ್ವರ ರಸ್ತೆಯಲ್ಲಿರುವ ದೋಬಿ ಘಾಟ ಸಮೀಪ ಹೋಗಿ, ಎರಡೂ ವಾಹನಗಳನ್ನು ಮರೆಯಲ್ಲಿ ನಿಲ್ಲಿಸಿ, ನಾವು ಮತ್ತು ಪಂಚರು ಇಳಿದು ಮರೆಯಲ್ಲಿ ನಿಂತು ವಾಚ್ ಮಾಡಲಾಗಿ, ದೋಬಿ ಘಾಟ ಹತ್ತಿರ ರಸ್ತೆಯ ದಕ್ಷಿಣ ದಿಕ್ಕಿನ ಕಡೆಗೆ ರಸ್ತೆಯ ಮೇಲೆ 5 ಜನರು ಗುಂಪು ಕಟ್ಟಿಕೊಂಡು ನಿಂತಿದ್ದು ಮತ್ತು ಅವರ ಕೈಗಳಲ್ಲಿ ಮಾರಕಾಸ್ತ್ರಗಳು ಇದ್ದವು ಮತ್ತು ಅವರ ಹಿಂದೆ ಒಂದು ಕಾರ, ಮುಂದೆ ಸ್ವಲ್ಪ ಅಂತರದಲ್ಲಿ ಒಂದು ಮೋಟರ ಸೈಕಲ ನಿಂತಿದ್ದು, ಸದರಿ ಕಾರಿನಲ್ಲಿ ಇಬ್ಬರು ವ್ಯಕ್ತಿಗಳು ಇದ್ದು, ಸದರಿ ಮೋಟರ ಸೈಕಲ ಹತ್ತಿರ ಒಬ್ಬ ವ್ಯಕ್ತಿ ಇದ್ದು, ರಸ್ತೆಯ ಮೇಲೆ ನಿಂತ 5 ಜನರ ಪೈಕಿ, ಇಬ್ಬರು ಜನರು ಕಾರಿನ ಕಡೆ ಹೋಗಿ ನಿಂತರು. ಉಳಿದ ಮೂರು ಜನರು ರಸ್ತೆಯ ಮೇಲೆ ಹೋಗಿ ಬರುವ ಜನರನ್ನು ನೋಡುತ್ತಾ ವಾಹನಗಳನ್ನು ನಿಲ್ಲಿಸುತ್ತಾ ನಿಂತಿದ್ದು ಆಗ ಒಂದು ಲಾರಿ ಬಂದಿದ್ದು, ಅವರು ಕೈ ಮಾಡಲು ಸದರಿ ಲಾರಿ ನಿಲ್ಲಲಿಲ್ಲಾ. ಆ ಲಾರಿಯ ಚಾಲಕನು ನಿಲ್ಲಿಸದೇ ಜೋರಾಗಿ ಗಂಗಿಮಡಿ ಕ್ರಾಸ ಕಡೆಗೆ ಹೋಗಿದ್ದು, ಇದನ್ನು ನಾನು ಹಾಗೂ ಉಳಿದ ಸಿಬ್ಬಂದಿ ಜನರು ರಸ್ತೆಯಲ್ಲಿರುವ ಲೈಟಿನ ಬೆಳಕಿನಲ್ಲಿ ನೋಡಿ, ನಾವೆಲ್ಲರೂ ಕೂಡಿ ಸದರೀಯವರಿಗೆ ಹಿಡಿಯಬೇಕು ಅಂತಾ ಎಲ್ಲರೂ ಸುತ್ತುವರೆಯಲು, ಅವರು ಓಡಿ ಹೋಗಲು ಪ್ರಯತ್ನಿಸಿದ್ದು, ಆಗ ನಾನು, ನನ್ನ ಜೊತೆ ಬಂದ ಸಿಬ್ಬಂದಿ ಜನರು ಅವರ ಪೈಕಿ ಮೂರು ಜನರನ್ನು ಹಿಡಿದುಕೊಂಡಿದ್ದು, ಕಾರಿನಲ್ಲಿದ್ದವರಿಗೆ ಹಾಗೂ ಮೋಟರ ಸೈಕಲ ಹತ್ತಿರ ನಿಂತುಕೊಂಡಿದ್ದವರಿಗೆ ಚಾಸಾ-4 ರವರು ಮತ್ತು ಅವರ ಜೊತೆ ಇದ್ದ

ಸಿಬ್ಬಂದಿಯವರು ಹಿಡಿದುಕೊಂಡಿರುತ್ತಾರೆ.

5. ನಾವು ಹಿಡಿದ ಜನರಿಗೆ ವಿಚಾರಿಸಲು ಅವರು ಯಾವುದೇ ಸಮರ್ಪಕ ಉತ್ತರವನ್ನು ಕೊಡಲಿಲ್ಲ ಮತ್ತು ರಸ್ತೆಯ ಮೇಲೆ ನಿಂತವರ ಕೈಗಳಲ್ಲಿ ಕಬ್ಬಿಣದ ರಾಡು ಹಾಗೂ ಖಾರದ ಪುಡಿ ಚೀಟು ಹಾಗೂ ಚಾಕು ಇದ್ದು, ಅವರ ಮೇಲೆ ನಮಗೆ ಸಂಶಯ ಬಂದು, ಅವರನ್ನು ತಪಾಸ ಮಾಡಿ ನೋಡಲಾಗಿ ಮತ್ತು ಅವರ ಹೆಸರುಗಳನ್ನು ವಿಚಾರಿಸಲಾಗಿ - 1) ಶಾಬೀರ ತಂದೆಃ ಮುಸಾ, ರಾಜ್ಯಃ ಹರಿಯಾಣ, 2) ಮಹ್ಮದಸೋಹಿಲಖಾನ ಉರ್ಫ ಸೋನುಖಾನ, 3) ಇಸಾಕ ತಂದೆಃ ನಜೀರಅಹ್ಮದ ಅತ್ತಾರ, 4) ಶರೀಫ ತಂದೆಃ ರೆಹಮಾನ, ರಾಜ್ಯಃ ಹರಿಯಾಣ, 5) ರಫೀಕ ತಂದೆಃ ಬಸೀರ, ರಾಜ್ಯಃ ಹರಿಯಾಣ, 6) ಇಮ್ತಿಯಾಜ ಗೋಕಾಕ, 7) ಅನ್ವರ ತಂದೆಃ ಮಹ್ಮದಅಲಿ ಸಾಃ ಮುಂಬಯಿ, ರಾಜ್ಯಃ ಮಹಾರಾಷ್ಟ್ರ, 8) ಮೌಲಾಲಿ ತಂದೆಃ ಗೂಡುಸಾಬ ಕರ್ಜಗಿ ಎಂದು ಹೇಳಿರುತ್ತಾರೆ. ಅವರುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರ ಪೈಕಿ ಈ ದಿನ ನ್ಯಾಯಾಲಯದ ಮುಂದೆ ಇರುವ ಇಮ್ತಿಯಾಜ ಗೋಕಾಕ, ಮೌಲಾಲಿ ತಂದೆಃ ಗೂಡುಸಾಬ ಕರ್ಜಗಿ ಇದ್ದು, ಅವರು 6 ಮತ್ತು 8 ನೇ ಆರೋಪಿಗಳಾಗಿರುತ್ತಾರೆ. (ಮಹ್ಮದಸೋಹಿಲಖಾನ ಉರ್ಫ ಸೋನುಖಾನ ಮತ್ತು ಇಸಾಕ ತಂದೆಃ ನಜೀರಅಹ್ಮದ ಅತ್ತಾರ, ಆರೋಪಿಗಳು ಗೈರು ಹಾಜರಾಗಿದ್ದು, ಅವರು 2 ಮತ್ತು 3 ನೇ ಆರೋಪಿಗಳಾಗಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಆತನ ಗುರುತಿಸುವಿಕೆಯನ್ನು ವಿವಾದಿಸುವುದಿಲ್ಲ ಎಂದು ಹೇಳಿರುತ್ತಾರೆ. ಶಾಬೀರ ತಂದೆಃ ಮುಸಾ, ರಾಜ್ಯಃ ಹರಿಯಾಣ, ಶರೀಫ ತಂದೆಃ ರೆಹಮಾನ, ರಾಜ್ಯಃ ಹರಿಯಾಣ, ರಫೀಕ ತಂದೆಃ ಬಸೀರ, ರಾಜ್ಯಃ ಹರಿಯಾಣ, ಮತ್ತು ಅನ್ವರ ತಂದೆಃ ಮಹ್ಮದಅಲಿ ಸಾಃ ಮುಂಬಯಿ, ರಾಜ್ಯಃ ಮಹಾರಾಷ್ಟ್ರ ಇವರು ಕ್ರಮವಾಗಿ 1, 4, 5 ಮತ್ತು 7 ನೇ ಆರೋಪಿಗಳಾಗಿದ್ದು ವಿರುದ್ಧ ಪ್ರಕರಣವನ್ನು ವಿಭಜಿಸಲಾಗಿರುತ್ತದೆ. **(Split up SC No. 77/2023)).**

6. 1 ನೇ ಆರೋಪಿಯನ್ನು ತಪಾಸ ಮಾಡಿ ನೋಡಲಾಗಿ, ಆತನ ಕೈಯಲ್ಲಿ ಒಂದು ಕಬ್ಬಿಣದ ಸಳಿ, ಒಂದು ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲ ಇತ್ತು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದಿಂದ ಸುತ್ತಿ ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಕಬ್ಬಿಣದ ರಾಡನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು 1 ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿ ಅದನ್ನು ಗುರುತಿಸಿದ್ದು, ಸದರಿ ಕಬ್ಬಿಣದ ರಾಡನ್ನು ಮು.ಮಾ.1 ಎಂದು ಗುರುತಿಸಲಾಯಿತು.**

**7. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ ,ೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲ ನ್ನು ಸಾಕ್ಷಿಗೆ**

ತೋರಿಸಲಾಗಿ ಸಾಕ್ಷಿ ಅದನ್ನು 1 ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿ ಅದನ್ನು ಗುರುತಿಸಿದ್ದು, ಸದರಿ ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲ ಮು.ಮಾ.2 ಎಂದು ಗುರುತಿಸಲಾಯಿತು.

8. 2 ನೇ ಆರೋಪಿ ಕೈಯಲ್ಲಿ ಖಾರದ ಪುಡಿ ಇದ್ದ ಒಂದು ಸಣ್ಣ ಪ್ಲಾಸ್ಟಿಕ ಕವರನ್ನು, ಒಂದು ಆ್ಯಪಲ್ ಕಂಪನಿಯ ಐ ಫೋನನ್ನು ಹಾಗೂ ಒಂದು ವಿವೋ ಕಂಪನಿಯ ಎಂಡ್ರ್ಯಾಡ್ ಮೊಬೈಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಸ್ವಲ್ಪ ಖಾರದ ಪುಡಿ ಇರುವ ಪ್ಲಾಸ್ಟಿಕ ಸಣ್ಣ ಕವರನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಖಾರದ ಪುಡಿಯನ್ನು 2 ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಖಾರದ ಪುಡಿ ಇರುವ ಸಣ್ಣ ಪ್ಲಾಸ್ಟಿಕ ಕವರನ್ನು ಮು.ಮಾ.3 ಎಂದು ಗುರುತಿಸಲಾಯಿತು.

9. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಆ್ಯಪಲ್ ಕಂಪನಿಯ ಐ ಫೋನನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಖಾರದ ಪುಡಿಯನ್ನು 2 ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಆ್ಯಪಲ್ ಕಂಪನಿಯ ಐ ಫೋನನ್ನು ಮು.ಮಾ.4 ಎಂದು ಗುರುತಿಸಲಾಯಿತು.

10. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ವಿವೋ ಕಂಪನಿಯ ಎಂಡ್ರ್ಯಾಡ್ ಫೋನನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಖಾರದ ಪುಡಿಯನ್ನು 2 ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ವಿವೋ ಕಂಪನಿಯ ಎಂಡ್ರ್ಯಾಡ್ ಮೊಬೈಲನ್ನು ಮು.ಮಾ.5 ಎಂದು ಗುರುತಿಸಲಾಯಿತು.

11. 3 ನೇ ಆರೋಪಿಯಿಂದ ಒಂದು ಸಣ್ಣ ಪ್ಲಾಸ್ಟಿಕ ಹಿಡಿಕೆ ಇದ್ದ ಚಾಕುವನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಸಣ್ಣ ಪ್ಲಾಸ್ಟಿಕ ಹಿಡಿಕೆ ಇದ್ದ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಚಾಕುವನ್ನು 3 ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಚಾಕುವನ್ನು ಮು.ಮಾ.6 ಎಂದು ಗುರುತಿಸಲಾಯಿತು.

12. 4ನೇ ಆರೋಪಿಯಿಂದ ಒಂದು ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು 4ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಚಾಕುವನ್ನು ಮು.ಮಾ.7 ಎಂದು ಗುರುತಿಸಲಾಯಿತು.

13. 5ನೇ ಆರೋಪಿಯಿಂದ ಒಂದು ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಸ್ಯಾಮಸಂಗ ಕಂಪನಿಯ ಕೀ ಪ್ಯಾಡ ಮೊಬೈಲನ್ನು 5ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಸ್ಯಾಮಸಂಗ ಕಂಪನಿಯ ಕೀ ಪ್ಯಾಕ ಮೊಬೈಲನ್ನು ಮು.ಮಾ.8 ಎಂದು ಗುರುತಿಸಲಾಯಿತು.

14. 6ನೇ ಆರೋಪಿಯಿಂದ ಒಂದು ಐ ಬಾಲ್ ಕಂಪನಿಯ ಕೀ ಪ್ಯಾಡ ಮೊಬೈಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಐ ಬಾಲ್ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಐ ಬಾಲ್ ಕಂಪನಿಯ ಕೀ ಪ್ಯಾಡ ಮೊಬೈಲನ್ನು 6ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಐ ಬಾಲ್ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಮು.ಮಾ.9 ಎಂದು ಗುರುತಿಸಲಾಯಿತು.

15. 7ನೇ ಆರೋಪಿಯಿಂದ ಒಂದು ಸ್ಯಾಮಂಸಗ ಕಂಪನಿಯ ಆ್ಯಂಡ್ರ್ಯಾಡ್ ಮೊಬೈಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಸ್ಯಾಮಂಸಗ ಕಂಪನಿಯ ಆ್ಯಂಡ್ರ್ಯಾಡ್ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಸ್ಯಾಮಂಸಗ ಕಂಪನಿಯ ಆ್ಯಂಡ್ರ್ಯಾಡ್ ಮೊಬೈಲನ್ನು 7ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಸ್ಯಾಮಂಸಗ ಕಂಪನಿಯ ಆ್ಯಂಡ್ರ್ಯಾಡ್ ಮೊಬೈಲನ್ನು ಮು.ಮಾ.10 ಎಂದು ಗುರುತಿಸಲಾಯಿತು.

16. 8ನೇ ಆರೋಪಿಯಿಂದ ಒಂದು ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಹಾಗೂ ಇನ್ನೊಂದು ಪೀಸ್ ಕೀ ಪ್ಯಾಡ ಮೊಬೈಲನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು 8ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ನೋಕಿಯಾ ಕಂಪನಿಯ ಕೀ ಪ್ಯಾಡ ಮೊಬೈಲನ್ನು ಮು.ಮಾ.11 ಎಂದು ಗುರುತಿಸಲಾಯಿತು.

17. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಪೀಸ್ ಕೀ ಪ್ಯಾಡ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಪೀಸ್ ಕೀ ಪ್ಯಾಡ ಮೊಬೈಲನ್ನು 8ನೇ ಆರೋಪಿಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಪೀಸ್ ಕೀ ಪ್ಯಾಡ ಮೊಬೈಲನ್ನು ಮು.ಮಾ.12 ಎಂದು ಗುರುತಿಸಲಾಯಿತು.

18. ಹಾಗೆಯೇ ಟಿವಿಎಸ್ ಕಂಪನಿಯ ಅಪಾಚಿ ಮೋಟರ ಸೈಕಲ ನಂ. ಕೆಎ-20/ಹೆಚ್-7926 ನೇದ್ದನ್ನು ಹಾಗೂ ಸದರಿ ಮೋಟರ ಸೈಕಲನ ಕವರಿನ ಬ್ಯಾಗಿನಲ್ಲಿದ್ದ ಒಂದು ಕಟ್ಟಿಗೆಯ ಹಿಡಿಕೆ ಹೊಂದಿದ ಗುಣಕ ವನ್ನು ವಶಪಡಿಸಿಕೊಂಡಿದ್ದು ಇರುತ್ತದೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

(ಸದರಿ ಮೋಟರ ಬೈಕ ನಂ. ಕೆಎ-20/ಹೆಚ್-7926 ನೇದ್ದು ಮುದ್ದೆ ಮಾಲು ಕೊಠಡಿಯಲ್ಲಿದ್ದು, ಈಗ ಸಾಕ್ಷಿಗೆ ಸದರಿ ಮೋಟರ ಬೈಕನ್ನು ಗುರುತಿಸುವ ಸಲುವಾಗಿ ಮುದ್ದೆ ಮಾಲು ಕೊಠಡಿಗೆ ಕಳಿಸಲಾಯಿತು. ಸಾಕ್ಷಿ ಸದರಿ ಮೋಟರ ಬೈಕನ್ನು ನೋಡಿ, ಗುರುತಿಸಿ, ಮರಳಿ ಬಂದಿದ್ದು, ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

19. ಸದರಿ ಮೋಟರ ಸೈಕಲನ್ನು ಮು.ಮಾ.13 ಎಂದು ಗುರುತಿಸಲಾಯಿತು. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಕಟ್ಟಿಗೆಯ ಹಿಡಿಕೆ ಹೊಂದಿದ ಗುಣಕವನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಕಟ್ಟಿಗೆಯ ಹಿಡಿಕೆ ಹೊಂದಿದ ಗುಣಕ ವನ್ನು ಮೋಟರ ಸೈಕಲ ಕವರಿನಿಂದ ಅಮಾನತ್ತುಪಡಿಸಿಕೂಂಡಿರುವುದಾಗಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಕಟ್ಟಿಗೆಯ ಹಿಡಿಕೆ ಹೊಂದಿದ ಗುಣಕವನ್ನು ಮು.ಮಾ.14 ಎಂದು ಗುರುತಿಸಲಾಯಿತು.

20. ಹಾಗೆಯೇ ಕಾರಿನಲ್ಲಿದ್ದ ಎರಡು ಕಬ್ಬಿಣದ ರಾಡುಗಳನ್ನು, ಖಾರದ ಪುಡಿ ಇದ್ದ ಒಂದು

ಸಣ್ಣ ಪ್ಲಾಸ್ಟಿಕ ಕವರ ಹಾಗೂ ಒಂದು ಸಣ್ಣ ಚಾಕು ಇವುಗಳನ್ನು ವಶಪಡಿಸಿಕೊಂಡಿದ್ದು ಅವುಗಳನ್ನು ನೋಡದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಎರಡು ಕಬ್ಬಿಣದ ರಾಡುಗಳನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಕಬ್ಬಿಣದ ರಾಡುಗಳನ್ನು ಕಾರಿನಿಂದ ಅಮಾನತ್ತುಪಡಿಸಿಕೊಂಡಿರುವುದಾಗಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಎರಡು ಕಬ್ಬಿಣದ ರಾಡುಗಳನ್ನು ಒಟ್ಟಾಗಿ ಮು.ಮಾ.15 ಎಂದು ಗುರುತಿಸಲಾಯಿತು.**

**21. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಖಾರದ ಪುಡಿ ಇದ್ದ ಒಂದು ಸಣ್ಣ ಪ್ಲಾಸ್ಟಿಕ ಕವರ ಸಾಕ್ಷಿಗೆ ತೋರಿಸಲಾಗಿ, ಸದರಿ ಕವರನ್ನು ಕಾರಿನಿಂದ ಅಮಾನತ್ತುಪಡಿಸಿಕೊಂಡಿರುವುದಾಗಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಖಾರದ ಪುಡಿ ಇದ್ದ ಒಂದು ಸಣ್ಣ ಪ್ಲಾಸ್ಟಿಕ ಕವರನ್ನು ಮು.ಮಾ.16 ಎಂದು ಗುರುತಿಸಲಾಯಿತು.**

**22. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಪ್ಲಾಸ್ಟಿಕ ಹಿಡಿಕೆಯುಳ್ಳ ಸಣ್ಣ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ಚಾಕುವನ್ನು ಕಾರಿನಿಂದ ಅಮಾನತ್ತುಪಡಿಸಿಕೊಂಡಿರುವುದಾಗಿ ಹೇಳಿ ಅದನ್ನು ಗುರುತಿಸಿದ್ದು, ಸದರಿ ಪ್ಲಾಸ್ಟಿಕ ಹಿಡಿಕೆಯುಳ್ಳ ಸಣ್ಣ ಚಾಕುವನ್ನು ಮು.ಮಾ.17 ಎಂದು ಗುರುತಿಸಲಾಯಿತು.**

23. ಸದರಿ ಕಾರಿನ ಡಿಕ್ಕಿಯನ್ನು ತೆಗೆದು ನೋಡಲಾಗಿ, ಅದರಲ್ಲಿ ಒಂದು ನೀಲಿ ಬಣ್ಣದ Superpak ಎಂದು ಬರೆಯಲಾದ ದೊಡ್ಡ ಬ್ಯಾಗ ಇದ್ದು, ಅದರಲ್ಲಿ ಬಿದಿರಿನ ಕಾವು ಇದ್ದ ಒಂದು ದೊಡ್ಡ ಕಬ್ಬಿಣದ ಗನ್, 3 ಫೂಟ್ ಉದ್ದ ಇದ್ದ ಒಂದು ಕಬ್ಬಿಣದ ಹಾರಿ ಇದ್ದು ಒಂದು ಕಡೆ ಚೂಪಾಗಿತ್ತು, ಒಂದು ಕೇಸರಿ ಬಣ್ಣದ ರಬ್ಬರ ಹೊಂದಿದ್ದ ಕಟ್ಟರ್, ಒಂದು ನೀಲಿ ಬಣ್ಣದ ರಬ್ಬರ ಹಿಡಿಕೆ ಹೊಂದಿದ್ದ ಕಟಿಂಗ್ ಪ್ಲೇಯರ್, ಮೂರು ಸ್ಕ್ರೂ ಡ್ರೈವರಗಳು ಇದ್ದು, ಅದರಲ್ಲಿ ಒಂದು ದೊಡ್ಡ ಗಾತ್ರದ ಹಸಿರು ಹಿಡಿಕೆ ಇದ್ದ 1 ಫೂಟ್ 3 ಇಂಚು ಉದ್ದ ಇದ್ದದ್ದು, ಒಂದು ಸಣ್ಣ ಗಾತ್ರದ ಹಸಿರು ಹಿಡಿಕೆ ಇದ್ದ 3 ಇಂಚು ಉದ್ದ ಇದ್ದದ್ದು, ಒಂದುಸಣ್ಣ ಗಾತ್ರದ ಹಳದಿ ಹಿಡಿಕೆ ಇದ್ದ 6 ಇಂಚು ಉದ್ದ ಇದ್ದದ್ದು, ಒಂದು ನೀಲಿ ಬಣ್ಣದ ಲೈಟರ್, ಒಂದು ಸಣ್ಣ ಸ್ಟೀಲ ನಮೂನೆಯ ಮೂರು ಸಣ್ಣ ಪಾನಾಗಳು ಇದ್ದ ಬಾಕ್ಸ, 450 ಗ್ರಾಂ ಗ್ಯಾಲಕ್ಸಿ ಜೆಲ್ ಇದ್ದ ಪ್ಲಾಸ್ಟಿಕ ಡಬ್ಬಿ, ಸುಮಾರು 33 ಇಂಚು ಉದ್ದ ಇರುವ ಆಕ್ಸಿಜನ ಸಿಲೆಂಡರ ಮತ್ತು ಅದಕ್ಕೆ ಜೋಡಿಸಿದ 2 ಕೆಜಿ ಗ್ಯಾಸ ಇದ್ದ ಕೆಂಪು ಬಣ್ಣದ ಕೆಎಬಿ ಸನ್ಸ ಎಲ್.ಪಿ.ಜಿ. ಗ್ಯಾಸ ಸಿಲೆಂಡರ ಹಾಗೂ ಅದಕ್ಕೆ ಜೋಡಿಸಿದ Indane Regulator

ಇವುಗಳಿಂದ ಬರ್ನರ ಗನ್ನಿಗೆ ಜೋಡಣೆಯಾದ ಡೆನಲಪ್ ಕಂಪನಿಯ ನೀಲಿ ಬಣ್ಣದ ಪೈಪು ಇವುಗಳನ್ನು ವಶಪಡಿಸಿಕೊಂಡಿರುತ್ತೇನೆ.

**(ಈಗ ಸಮಯ ಮದ್ಯಾಹ್ನ 02.00 ಗಂಟೆಯಾಗಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮದ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು.)**

**ಮದ್ಯಾಹ್ನ 02.45 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪಿಪಿ ರವರಿಂದಃ**

24. ಈಗ ಸದರಿ ನೀಲಿ ಬಣ್ಣದ **Superpak** ಎಂದು ಬರೆಯಲಾದ ದೊಡ್ಡ ಬ್ಯಾಗ ನೋಡುತ್ತಿದ್ದು ಅದನ್ನು ಮು.ಮಾ.18 ಎಂದು ಗುರುತಿಸಲಾಯಿತು.

25. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದಿಂದ ಸುತ್ತಿ ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಬಿದಿರಿನ ಕಾವು ಇದ್ದ ಒಂದು ದೊಡ್ಡ ಕಬ್ಬಿಣದ ಗನ್ ನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಬಿದಿರಿನ ಕಾವು ಇದ್ದ ಒಂದು ದೊಡ್ಡ ಕಬ್ಬಿಣದ ಗನ್ ನ್ನು ಮು.ಮಾ.19 ಎಂದು ಗುರುತಿಸಲಾಯಿತು.

26. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದಿಂದ ಸುತ್ತಿ ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ 3 ಫೂಟ್ ಉದ್ದದ ಒಂದು ಕಡೆ ಚೂಪಾಗಿದ್ದ ಕಬ್ಬಿಣದ ಹಾರಿಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ 3 ಫೂಟ್ ಉದ್ದದ ಒಂದು ಕಡೆ ಚೂಪಾಗಿದ್ದ ಕಬ್ಬಿಣದ ಹಾರಿಯನ್ನು ಮು.ಮಾ.20 ಎಂದು ಗುರುತಿಸಲಾಯಿತು.

27. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದಿಂದ ಸುತ್ತಿ ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ಕೇಸರಿ ಬಣ್ಣದ ರಬ್ಬರ ಹೊಂದಿದ್ದ ಕಟ್ಟರ್ ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಒಂದು ಕೇಸರಿ ಬಣ್ಣದ ರಬ್ಬರ ಹೊಂದಿದ್ದ ಕಟ್ಟರ್ ನ್ನು ಮು.ಮಾ.21 ಎಂದು ಗುರುತಿಸಲಾಯಿತು.

28. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ, ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ನೀಲಿ ಬಣ್ಣದ ರಬ್ಬರ ಹಿಡಿಕೆ ಹೊಂದಿದ್ದ ಕಟಿಂಗ್ ಪ್ಲೇಯರ್ ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಒಂದು ನೀಲಿ ಬಣ್ಣದ ರಬ್ಬರ ಹಿಡಿಕೆ ಹೊಂದಿದ್ದ ಕಟಿಂಗ್ ಪ್ಲೇಯರ್ ನ್ನು ಮು.ಮಾ.22 ಎಂದು ಗುರುತಿಸಲಾಯಿತು.

29. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದಿಂದ ಸುತ್ತಿ, ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ದೊಡ್ಡ ಗಾತ್ರದ ಹಸಿರು ಹಿಡಿಕೆ ಇದ್ದ 1 ಫೂಟ್ 3 ಇಂಚು

ಉದ್ದ ಇದ್ದದ್ದು, ಒಂದು ಸಣ್ಣ ಗಾತ್ರದ ಹಸಿರು ಹಿಡಿಕೆ ಇದ್ದ 3 ಇಂಚು ಉದ್ದ ಇದ್ದದ್ದು, ಒಂದುಸಣ್ಣ ಗಾತ್ರದ ಹಳದಿ ಹಿಡಿಕೆ ಇದ್ದ 6 ಇಂಚು ಉದ್ದ ಇದ್ದ ಸ್ಕ್ರೂ ಡ್ರೈವರಗಳನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅವುಗಳನ್ನು ಗುರುತಿಸಿದ್ದು, ಸದರಿ ಒಂದು ದೊಡ್ಡ ಗಾತ್ರದ ಹಸಿರು ಹಿಡಿಕೆ ಇದ್ದ 1 ಫೂಟ್ 3 ಇಂಚು ಉದ್ದ ಇದ್ದದ್ದು, ಒಂದು ಸಣ್ಣ ಗಾತ್ರದ ಹಸಿರು ಹಿಡಿಕೆ ಇದ್ದ 3 ಇಂಚು ಉದ್ದ ಇದ್ದದ್ದು, ಒಂದುಸಣ್ಣ ಗಾತ್ರದ ಹಳದಿ ಹಿಡಿಕೆ ಇದ್ದ 6 ಇಂಚು ಉದ್ದ ಇದ್ದ ಸ್ಕ್ರೂ ಡ್ರೈವರಗಳನ್ನು ಒಟ್ಟಾಗಿ ಮು.ಮಾ.23 ಎಂದು ಗುರುತಿಸಲಾಯಿತು.

30. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ, ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಒಂದು ನೀಲಿ ಬಣ್ಣದ ಲೈಟರ್ ನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಒಂದು ನೀಲಿ ಬಣ್ಣದ ಲೈಟರ್ನ್ನು ಮು.ಮಾ.24 ಎಂದು ಗುರುತಿಸಲಾಯಿತು.

31. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ, ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಮೂರು ಸಣ್ಣ ಪಾನಾಗಳು (Spaner) ಗಳನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅವುಗಳನ್ನು ಗುರುತಿಸಿದ್ದು, ಸದರಿ ಮೂರು ಸಣ್ಣ ಪಾನಾಗಳು (Spaner) ಗಳನ್ನು ಒಟ್ಟಾಗಿ ಮು.ಮಾ.25 ಎಂದು ಗುರುತಿಸಲಾಯಿತು.

32. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ, ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ ಬಾಕ್ಸ ಪಾನಾವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಬಾಕ್ಸ ಪಾನಾವನ್ನು ಮು.ಮಾ.26 ಎಂದು ಗುರುತಿಸಲಾಯಿತು.

33. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ, ಪ್ಯಾಕ ಮಾಡಿ, ಸೀಲು ಮಾಡಿದ್ದನ್ನು ಬಿಚ್ಚಿ ಅದರಲ್ಲಿದ್ದ 450 ಗ್ರಾಂ ಗ್ಯಾಲಕ್ಸಿ ಜೆಲ್ ಇದ್ದ ಪ್ಲಾಸ್ಟಿಕ ಡಬ್ಬಿಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ 450 ಗ್ರಾಂ ಗ್ಯಾಲಕ್ಸಿ ಜೆಲ್ ಇದ್ದ ಪ್ಲಾಸ್ಟಿಕ ಡಬ್ಬಿ ಮು.ಮಾ.27 ಎಂದು ಗುರುತಿಸಲಾಯಿತು.

34. ಈಗ ತೆರೆದ ನ್ಯಾಯಾಲಯದಲ್ಲಿ, ಸುಮಾರು 33 ಇಂಚು ಉದ್ದ ಇರುವ ಆಕ್ಸಿಜನ ಸಿಲೆಂಡರ ಮತ್ತು ಅದಕ್ಕೆ ಜೋಡಿಸಿದ 2 ಕೆಜಿ ಗ್ಯಾಸ ಇದ್ದ ಕೆಂಪು ಬಣ್ಣದ ಕೆಎಬಿ ಸನ್ಸ ಎಲ್.ಪಿ.ಜಿ. ಗ್ಯಾಸ ಸಿಲೆಂಡರ ಹಾಗೂ ಅದಕ್ಕೆ ಜೋಡಿಸಿದ Indane Regulator ಇವುಗಳಿಂದ ಬರ್ನರ ಗನ್ನಿಗೆ ಜೋಡಣೆಯಾದ ಡೆನಲಪ್ ಕಂಪನಿಯ ನೀಲಿ ಬಣ್ಣದ ಪೈಪು ಇವುಗಳನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಸುಮಾರು 33 ಇಂಚು ಉದ್ದ ಇರುವ ಆಕ್ಸಿಜನ ಸಿಲೆಂಡರ ಮತ್ತು ಅದಕ್ಕೆ ಜೋಡಿಸಿದ 2 ಕೆಜಿ ಗ್ಯಾಸ ಇದ್ದ ಕೆಂಪು ಬಣ್ಣದ ಕೆಎಬಿ ಸನ್ಸ ಎಲ್.ಪಿ.ಜಿ. ಗ್ಯಾಸ ಸಿಲೆಂಡರ

**ಹಾಗೂ ಅದಕ್ಕೆ ಜೋಡಿಸಿದ Indane Regulator ಇವುಗಳಿಂದ ಬರ್ನರ ಗನ್ನಿಗೆ ಜೋಡಣೆಯಾದ ಡೆನಲಪ್ ಕಂಪನಿಯ ನೀಲಿ ಬಣ್ಣದ ಪೈಪು ಇವುಗಳನ್ನು ಒಟ್ಟಾಗಿ ಮು.ಮಾ.28 ಎಂದು ಗುರುತಿಸಲಾಯಿತು.**

35. ಮು.ಮಾ.1 ರಿಂದ 28 ನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಬೆಳಗಿನ ಜಾವ 02.40 ರಿಂದ 04.15 ರ ವರೆಗೆ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಠಾಣೆಗೆ ಕೊಡಲಾದ ಲ್ಯಾಪಟಾಪನಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ. **ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.**

36. ನಿಪಿ-1 ಕ್ಕೆ 1 ರಿಂದ 3, 6 ರಿಂದ 8 ನೇ ಆರೋಪಿಗಳು ಸಹಿಗಳನ್ನು ಮಾಡಿರುತ್ತಾರೆ ಮತ್ತು 4 ಮತ್ತು 5 ನೇ ಆರೋಪಿತನು ತಮ್ಮ ಹೆಬ್ಬೆಟ್ಟಿನ ಗುರುತುಗಳನ್ನು ಹಾಕಿರುತ್ತಾರೆ. 1 ರಿಂದ 3, 6 ರಿಂದ 8 ನೇ **ಆರೋಪಿಗಳ ಸಹಿಗಳನ್ನು ಕ್ರಮವಾಗಿ ನಿಪಿ-1(ಬಿ), ನಿಪಿ-1(ಸಿ), ನಿಪಿ-1(ಡಿ), ನಿಪಿ-1(ಇ), ನಿಪಿ-1(ಎಫ್) ಮತ್ತು ನಿಪಿ-1(ಜಿ) ಎಂದು ಗುರುತಿಸಲಾಯಿತು.** ಹಾಗೆಯೇ ನಿಪಿ-1 ಕ್ಕೆ ಚಾಸಾ-2 ಮತ್ತು 3 ರವರು ಕೂಡಾ ತಮ್ಮ ಸಹಿಗಳನ್ನು ಮಾಡಿರುತ್ತಾರೆ. ನಿಪಿ-1 ನ್ನು ಚಾಸಾ-7 ರವರು ಗಣಕೀಕರಣ ಮಾಡಿ, ತಮ್ಮ ದಸ್ತೂರ ಸಹಿ ಮಾಡಿರುತ್ತಾರೆ. **ಚಾಸಾ-7 ರವರ ಸಹಿಯನ್ನು ನಿಪಿ-1(ಹೆಚ್) ಎಂದು ಗುರುತಿಸಲಾಯಿತು. ಹಾಗೆಯೇ ಚಾಸಾ-4, 5, 6, 8, 9, 10, 11, 12, 13 ರವರು ನಿಪಿ-1 ಕ್ಕೆ ತಮ್ಮ ಸಹಿಗಳನ್ನು ಮಾಡಿರುತ್ತಾರೆ. ಸದರೀಯವರ ಸಹಿಗಳನ್ನು ನಿಪಿ-1(ಐ) ರಿಂದ ನಿಪಿ-1(ಕ್ಯೂ) ಎಂದು ಕ್ರಮವಾಗಿ ಗುರುತಿಸಲಾಯಿತು.**

37. **ಆಗ ಸ್ಥಳದಲ್ಲಿಯೇ ಕಚ್ಚಾ ನಕಾಶೆಯನ್ನು ತಯಾರಿಸಲಾಗಿರುತ್ತದೆ. ಈಗ ಸದರಿ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ 10 ಫೋಟೋಗಳನ್ನು ತೆಗೆಯಲಾಗಿರುತ್ತದೆ. ಈಗ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-3 ರಿಂದ 12 ಎಂದು ಗುರುತಿಸಲಾಯಿತು.**

38. ಮು.ಮಾ.1 ರಿಂದ 12, 14, 15 ರಿಂದ 17, 19 ರಿಂದ 27 ಗಳ ಪ್ಯಾಕುಗಳ ಮೇಲೆ ಪಂಚರು ಮತ್ತು ನಾನು ಸಹಿ ಮಾಡಿರುವ ಚೀಟಿಗಳನ್ನು ಅಂಟಿಸಲಾಯಿತು.

38. ಕಾರನ್ನು ನೋಡಿದರೆ ಗುರುತಿಸುತ್ತೇನೆ. (ಸದರಿ ಕಾರನ್ನು ನ್ಯಾಯಾಲಯದಿಂದ ಮಧ್ಯಂತರ ಸ್ವಾಧೀನಕ್ಕೆ ನೀಡಲಾಗಿರುತ್ತದೆ.) **ಸದರಿ ಕಾರಿನ 4 ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-13 ರಿಂದ 16 ಎಂದು ಗುರುತಿಸಲಾಯಿತು.** ನಾನು ಮಹಜರ ಮಾಡಲಾದ ಕಾರು ಮತ್ತು ಮಾಲೀಕರ ಮಧ್ಯಂತರ ಸ್ವಾಧೀನಕ್ಕೆ ನೀಡಿದ ಕಾರು ಒಂದೇ ಆಗಿರುತ್ತದೆ. ಆದರೆ ಜಪ್ತ ಮಾಡುವ ಕಾಲಕ್ಕೆ ಕರ್ನಾಟಕ ರಾಜ್ಯದ ನೋಂದಣಿ ಸಂಖ್ಯೆಯ ಬೋರ್ಡನ್ನು ಹಾಕಲಾಗಿರುತ್ತದೆ

ಮತ್ತು ಅದು ಮಹಾರಾಷ್ಟ್ರ ರಾಜ್ಯದ ನೋಂದಣಿ ಸಂಖ್ಯೆಯಾಗಿರುತ್ತದೆ ಎಂದು ನನಗೆ ನಂತರ ಗೊತ್ತಾಗಿರುತ್ತದೆ.

39. ನಂತರ ಆರೋಪಿಗಳನ್ನು, ಸಿಕ್ಕ ಮಾಲುಗಳನ್ನು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ಬಂದು, ಸರ್ಕಾರದ ಪರವಾಗಿ ನಾನು ದೂರನ್ನು ಸಲ್ಲಿಸಿ, ಆರೋಪಿಗಳನ್ನು, ಸಿಕ್ಕ ಮಾಲುಗಳನ್ನು ಮತ್ತು ಪಂಚನಾಮೆಯೊಂದಿಗೆ ಮುಂದಿನ ಕ್ರಮಕ್ಕಾಗಿ ಅವರಿಗೆ ಒಪ್ಪಿಸಿರುತ್ತೇನೆ. **ಈಗ ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.**

**<u>ಪಾಟಿ ಸವಾಲುಃ ಶ್ರೀ ಎಂ.ಎಂ. ಕುಕನೂರ, 2 ನೇ ಆರೋಪಿ ಪರ ವಕೀಲರಿಂದಃ</u>**

**(ವಕೀಲರು ಗೈರು ಹಾಜರಾಗಿದ್ದು, ಪಾಟಿ ಸವಾಲನ್ನು ಮುಂದೂಡಲಾಯಿತು.)**

**<u>ಪಾಟಿ ಸವಾಲುಃ ಶ್ರೀ ಜೆ.ವಿ. ಪಠಾಣ, 3 ನೇ ಆರೋಪಿ ಪರ ವಕೀಲರಿಂದಃ</u>**

**(ವಕೀಲರು ಗೈರು ಹಾಜರಾಗಿದ್ದು, ಪಾಟಿ ಸವಾಲನ್ನು ಮುಂದೂಡಲಾಯಿತು.)**

**<u>ಪಾಟಿ ಸವಾಲುಃ ಶ್ರೀ ಜಿ.ಡಿ.ಜೆ., 6 ನೇ ಆರೋಪಿ ಪರ ವಕೀಲರಿಂದಃ</u>**

**(ವಕೀಲರು ಗೈರು ಹಾಜರಾಗಿದ್ದು, ಪಾಟಿ ಸವಾಲನ್ನು ಮುಂದೂಡಲಾಯಿತು.)**

**<u>ಪಾಟಿ ಸವಾಲುಃ ಶ್ರೀ ಐ.ಎ. ಬೇಪಾರಿ, 8 ನೇ ಆರೋಪಿ ಪರ ವಕೀಲರಿಂದಃ</u>**

**(ಶ್ರೀಮತಿ ಆರ್.ಎ.ಎಲ್. ವಕೀಲರು, ಶ್ರೀ ಎಂ.ಎಂ. ಕುಕನೂರ ವಕೀಲರ ಪರವಾಗಿ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**

*SC No. 32/2018*
*PW - 2*

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 32/2018

ಸಿಡಬ್ಲು: 3 / ಪಿಡಬ್ಲು: 2

ದಿನಾಂಕ: 23.11.2023

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ಪಾಯಪ್ಪಗೌಡರ |
| ತಂದೆ /ಗಂಡನ ಹೆಸರು | : | ಈರಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪೇಂಟರ |
| ವಾಸ ಸ್ಥಳ | : | ಗದಗ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಈಗ ತೋರಿಸಿದ ನಿಪಿ-1 ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಗಿದ್ದ, ಸಾಕ್ಷಿಯ ಸಹಿಯನ್ನು ನಿಪಿ-1(ಆರ್) ಎಂದು ಗುರುತಿಸಲಾಯಿತು.

2. ಈಗ ಸುಮಾರು 4 - 5 ವರ್ಷಗಳ ಹಿಂದೆ ನನ್ನನ್ನು ಹಾಗೂ ಚಾಸಾ-2 ರವರನ್ನು ಗದಗ ಶಹರ ಪೋಲೀಸ ಠಾಣೆಗೆ ಕರೆಸಲಾಗಿತ್ತು ಮತ್ತು ಅಲ್ಲಿಂದ ನಮ್ಮನ್ನು ಗದಗ - ಲಕ್ಷ್ಮೇಶ್ವರ ರಸ್ತೆಯ ಮೇಲೆ ದೋಬಿ ಘಾಟದ ಹತ್ತಿರ ಕರೆದುಕೊಂಡು ಹೋಗಲಾಗಿರುತ್ತದೆ. ಅಲ್ಲಿಗೆ ಹೋದಾಗ ಸಮಯ ನಸುಕಿನ ಜಾವ 01.00 ಗಂಟೆಯಾಗಿತ್ತು. ಆ ದಿನ ನಾವು 2 - 3 ಜೀಪುಗಳಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ.

**(ಈ ಹಂತದಲ್ಲಿ, ಸಾಕ್ಷಿದಾರರು ಮುಂದಿನ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸರಿ ಅದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ